

## ಪ್ರತಾಪಸಿಂಹನ ರಕ್ಷಾಕವಚ

ಮಹಾರಾಣಾ ಪ್ರತಾಪಸಿಂಹ ಓರ್ವ ಅದ್ವಿತೀಯ ವೀರ. ಶೌರ್ಯ, ತ್ಯಾಗ, ಔದಾರ್ಯ ಮತ್ತು ದೃಢತೆಯ ಪ್ರತೀಕವೂ ಹೌದು. ಮೊಘಲರ ವಿರುದ್ಧ ಹೋರಾಡಿದ ವೀರ ಕಲಿ. ಈ ಚಿತ್ರದಲ್ಲಿ ಕಾಣುತ್ತಿರುವುದು ಪ್ರತಾಪಸಿಂಹ ಯುದ್ಧದ ವೇಳೆ ಧರಿಸುತ್ತಿದ್ದ ಶಿರಸ್ತ್ರಾಣ ಮತ್ತು ರಕ್ಷಾಕವಚ. ಸಣ್ಣ ತಂತಿಯಿಂದ ನೇಯ್ಗೆ ಮಾಡಲಾಗಿರುವ ಇದು 16.295 ಕೆ.ಜಿ. ತೂಕವಿದೆ. ಇದನ್ನು ರಾಜಸ್ಥಾನದ ಉದಯಪುರದ ಮಹಾರಾಣಾ ಪ್ರತಾಪಸಿಂಹ ಸ್ಮಾರಕ ಸಮಿತಿ ಮೋತಿ ಮಗ್ರಿ ಮ್ಯೂಸಿಯಂನಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿ ಪ್ರತಾಪಸಿಂಹನ ಜೀವನಚರಿತ್ರೆ ಹಾಗೂ ಆತನ ಆಳ್ವಿಕೆಯಲ್ಲಿ ನಡೆದ ಪ್ರಮುಖ ಘಟನಾವಳಿಗಳ ಚಿತ್ರಗಳು, ಆತ ಬಳಸುತ್ತಿದ್ದ ಖಡ್ಗ, ಗುರಾಣಿಗಳನ್ನೂ ಕಾಣಬಹುದಾಗಿದೆ.

–ಕೆ.ಟಿ. ಜಯಶ್ರೀ, ಹಾಸನ







## ಸಭ್ಯ ಹಾವು; ಮಣ್ಣುಹಾವು

ಕೆಂಪು ಮಣ್ಣಿನ ಹಾದಿಯಲ್ಲಿ ಮುಂಜಾನೆಯ ಮಂಜಿಗೆ ಮುದುಡಿದ ಆಕೃತಿಯೊಂದು ನಿಶ್ಚಲವಾಗಿ ಬಿದ್ದಿತ್ತು. ಯಾರೋ ದಾರಿಹೋಕರು ಟವೆಲ್ ಬೀಳಿಸಿಕೊಂಡು ಹೋಗಿದ್ದಾರೆಂದು ಹತ್ತಿರ ಹೋಗಿ ನೋಡಿದೆ. ಆದರೆ ಆ ಟವೆಲ್ ಆಕೃತಿ ಸಜೀವಗೊಂಡು ನಿಧಾನವಾಗಿ ಚಲಿಸಲು ಆರಂಭಿಸಿ, 'ನಾನು ಮಣ್ಣು ಹಾವು' ಎಂದು ತನ್ನನ್ನು ತಾನು ಪರಿಚಯಿಸಿಕೊಂಡಿತು.

ಮಣ್ಣುಮುಕ್ಕ ಹಾವು (Indian Sand Boa), ಎರಡು ತಲೆ ಹಾವು ಎಂದು ಕರೆಸಿಕೊಳ್ಳುವ ಈ ಹಾವು, ಉರಗ ಲೋಕದಲ್ಲೇ ಅತೀ ಸೌಮ್ಯವಾದದ್ದೆಂದು ಗುರುತಿಸಿಕೊಂಡಿದೆ. ಇದು ವಿಷರಹಿತವಾದದ್ದು. ಇಲಿಗಳ ಬಿಲದೊಳಗೆ ತೂರಿ, ಬಿಲದ ಮಣ್ಣಲ್ಲಿ ಹುದುಗಿಕೊಂಡು, ತನ್ನ ಇರುವಿಕೆಯನ್ನು ಮರೆಮಾಚಿ ಬೇಟೆಗಿಳಿಯುತ್ತದೆ. ತನ್ನ ಕೆಂಪು ಮಿಶ್ರಿತ ಕಂದು ಬಣ್ಣದ ಸಪೂರ ಶರೀರ, ಗಾಂಭೀರ್ಯದ ಚಲನೆ ಹಾಗೂ ತಲೆ ಬಾಲಗಳೂ ಒಂದೇ ತೆರನಾಗಿ ಕಾಣುವ ವೈಶಿಷ್ಟ್ಯದಿಂದ ನಿಸರ್ಗದ ಆಭರಣದಂತಿರುವ ಈ ನಿರುಪದ್ರವಿಗೆ ಮಾನವರಾದ ನಾವೇ ವೈರಿಗಳು.

'ಈ ಹಾವು ಮನುಷ್ಯರ ಬೆರಳನ್ನು ನೆಕ್ಕಿದರೆ ಬೆರಳೇ ಉದುರಿಹೋಗುತ್ತದೆ, ಇದಕ್ಕೆ ಎರಡು ತಲೆಗಳಿವೆ, ಇದನ್ನು ಮಡಿಕೆಯಲ್ಲಿ ಮುಚ್ಚಿ ಮನೆಯಲ್ಲಿಟ್ಟರೆ ಸಂಪತ್ತು ಹಾಗೂ ಸಂತಾನ ಪ್ರಾಪ್ತವಾಗುತ್ತದೆ' ಎನ್ನುವ ಮೌಢ್ಯವೂ ಇದೆ. ಇಂತಹ ಹತ್ತು ಹಲವು ಮೌಢ್ಯಗಳು ಹಾಗೂ ತೀವ್ರತರವಾದ ಪರಿಸರ ಬದಲಾವಣೆ, ಆಧುನಿಕ ಕೃಷಿ ವಿಧಾನಗಳಿಂದ ಇದರ ಸಂಖ್ಯೆ ಕನಿಷ್ಠ ಮಟ್ಟಕ್ಕೆ ಕುಸಿಯುತ್ತಿದೆ. ಈ ಮೌಢ್ಯ, ದುರಾಸೆಗಳಿಂದ ಮುಕ್ತರಾಗಿ ಈ ಹಾವನ್ನು ಒಂದು ಸಹಜೀವಿಯಂತೆ ಕಂಡು ಗೌರವಿಸಬೇಕಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಪ್ರಕಾರ ಇದರ ಬೇಟೆ, ದಾಸ್ತಾನು ಹಾಗೂ ಮಾರಾಟ ಶಿಕ್ಷಾರ್ಹ ಅಪರಾಧವಾಗಿದೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ


## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly